# ವೈರಸ್

■ ಸುದರ್ಶನ ಮೊಗಸಾಲೆ
ಕಲೆ: ಎಚ್‌ಎಸ್‌ ಮೋನಪ್ಪ

## ಒಂದು ಹಳ್ಳಿ, ಎರಡು ತಿಂಗಳು!

ಮ್ಯಾನೇಜರ್ 'ಕಾರಂತರೇ, ನಿಮ್ಮ ಎದುರೇ ಪ್ರಾಯೋಜಕರನ್ನು ಇಟ್ಟುಕೊಂಡು ಇಡೀ ಊರು ಹುಡುಕಲು ಹೊರಟಿದ್ದೀರಲ್ಲ?' ಎಂದವರೇ, 'ನೋಡಿ, ಐವತ್ತು ಯಾಕೆ, ನೂರು ಸ್ಮಾರ್ಟ್‌ಫೋನ್ ಮತ್ತು ಒಂದು ವರ್ಷದ ಇಂಟರ್ನೆಟ್ ಕನೆಕ್ಷನ್ ಫ್ರೀ ಆಗಿ ನಮ್ಮ ಕಂಪೆನಿ ಕೊಡುತ್ತದೆ. ನಿಮ್ಮ ಶೋನಲ್ಲಿ ಪ್ರತೀದಿನ ನಮಗೆ ಸಮಯ ಮತ್ತು ಪ್ರಚಾರ ಕೊಡಬೇಕು. ನಮ್ಮನ್ನು ಈ ಪ್ರೋಗ್ರಾಮ್‌ನ ಒಬ್ಬ ಪ್ರಾಯೋಜಕರಾಗಿ ನೀವು ತೋರಿಸಬೇಕು' ಅಂದರು.

ಶೆಟ್ಟರಿಗೂ ಆನಂದಣ್ಣನಿಗೂ ತಮ್ಮ ಕಿವಿಯನ್ನೇ ನಂಬದಂತಾಯಿತು. ಸಂಜಯ್ ಅವರ ಕಡೆಗೆ ತಿರುಗಿ 'ನಿಮ್ಮ ಅಭಿಪ್ರಾಯ ಏನು?' ಅಂತ ಅವರಲ್ಲಿ ಕೇಳಿದ. ಆನಂದಣ್ಣ 'ಕಾರಂತರೇ, ಇದೆಲ್ಲ ನಿಮಗೇ ಗೊತ್ತು... ನೀವೇ ನಿರ್ಧಾರ ಮಾಡಿ' ಅಂದರು. ಶೆಟ್ಟರು ತಲೆಯಾಡಿಸಿದರು.

ಸಂಜಯ್ ಮ್ಯಾನೇಜರ್ ಕಡೆ ತಿರುಗಿ, 'ನಿಮ್ಮ ಪ್ರಸ್ತಾಪ ಒಪ್ಪಿದ್ದೇವೆ. ನಾಳೆ ಸೀತಾಪುರದ ಗುಡ್ಡದಲ್ಲಿ ಟವರ್ ಕೆಲಸ ಪ್ರಾರಂಭಿಸಬೇಕು. ಹಾಗೇ ನೂರು ಸ್ಮಾರ್ಟ್ ಫೋನ್ ಮತ್ತು ಕನೆಕ್ಷನ್ ನೀವು ಕೊಡ್ತೀರಿ' ಅಂದ.

ಮ್ಯಾನೇಜರ್ 'ಹೌದು' ಅಂದರು.

ಆಗ ಸಂಜಯ್ ಪ್ರಭಾಕರನ ಕಡೆಗೆ ತಿರುಗಿ, 'ಪ್ರಭಾಕರ, ನಾವು ಈ ಕ್ಷಣವನ್ನು ರೆಕಾರ್ಡ್ ಮಾಡಬೇಕಲ್ಲ?' ಅಂದ. ಇಡೀ ಪ್ರಸಂಗವನ್ನು ಮೊದಲಿನಿಂದ ಚಿತ್ರೀಕರಿಸಲಾಯ್ತು. ಆನಂದಣ್ಣ, ಶೆಟ್ಟರು, ಸಂಜಯ್ ಜೊತೆಗೆ ನಿಯೋ ಆಫೀಸಿಗೆ ಬರುವುದು, ಮ್ಯಾನೇಜರ್ ಜೊತೆ ಮಾತಾಡುವುದು, ಮ್ಯಾನೇಜರ್ ಒಪ್ಪಿಕೊಳ್ಳುವುದು ಇತ್ಯಾದಿಯನ್ನು ವಿಡಿಯೊ ಮಾಡಿಕೊಳ್ಳಲಾಯಿತು. ಮ್ಯಾನೇಜರ್ ಹೇಗೆ ರಿಲಯನ್ಸ್ ಭಾರತದ ಹಳ್ಳಿ ಹಳ್ಳಿಗಳನ್ನು ಇಂಟರ್ನೆಟ್‌ನಿಂದ ಜೋಡಿಸುತ್ತಿದೆ, ಹಳ್ಳಿಗಳನ್ನು ಉದ್ಧಾರ ಮಾಡುತ್ತಿದೆ ಇತ್ಯಾದಿ ಮಾತಾಡಿದ.

ಎಲ್ಲರೂ ಹಿಂದೆ ಹೊರಟರು. ಮ್ಯಾನೇಜರ್ ಹೊರಗಿನವರೆಗೂ ಬಂದು ಅವರನ್ನು ಬೀಳ್ಕೊಟ್ಟ. ಮರುದಿನ ಬೆಳಗ್ಗೆ ಟವರನ್ನು ಸೀತಾಪುರಕ್ಕೆ ಸಾಗಿಸುವುದಾಗಿ ಹೇಳಿದ. ಎಲ್ಲರೂ ಬೆಳಗ್ಗೆ ಹತ್ತು ಗಂಟೆ ಸುಮಾರಿಗೆ ಶೆಣೈ ಮಾಮನ ಅಂಗಡಿ ಹತ್ತಿರ ಭೇಟಿಯಾಗುವುದಾಗಿ ನಿರ್ಧಾರ ಮಾಡಿದರು.

